**ಮೂ.ದಾ.ನಂ.66/2018**

ಪಿ.ಡಬ್ಲ್ಯು.1

(ಇಂದು ದಿನಾಂಕ: 22-07-2024 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಪಾಟೀ ಸವಾಲುಃ ಶ್ರೀ. ವಾಯ್.ಯು.ಎಸ್. ವಕೀಲರಿಂದಃ**

ನಾನು ಕಳೇದ 15 ವರ್ಷಗಳಿಂದ ಕೆ.ಎಸ್.ಆರ್.ಟಿ.ಸಿ ಚಾಲಕನಾಗಿ ಕೆಲಸ ನಿರ್ವಹಿಸುತ್ತಿದ್ದೇನೆ. ಇದರ ಪೂರ್ವದಲ್ಲಿ ನಾನು ಜಿ.ಎನ್.ಭಟ್ಟ ಇವರ ಬಳಿ ಟ್ರಕ್ ವಾಹನ ಚಾಲಕನಾಗಿ ಕೆಲಸ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಖರೀದಿಸಿದ ಸರ್ವೆ ನಂ.58 ಹಿಸ್ಸಾ 1 ಅ ಅದರ ಚತುರ್ಗಡಿಯನ್ನು ಹೇಳಬಹುದು. ಸ್ವದ್ರಿ ಜಾಗದ ಪೂರ್ವಕ್ಕೆ ಪ್ರತಿವಾದಿಯವರ ಹಕ್ಕಿನ ಸ್ಥಳವಾಗಿರುತ್ತದೆ. ಸ್ವದ್ರಿ ಜಾಗದ ಪಶ್ಚಿಯಕ್ಕೆ ಸರ್ವೆ ನಂ.48 ಪ್ರತಿವಾದಿಯವರ ಹಕ್ಕಿನ ಸ್ಥಳವಾಗಿರುತ್ತದೆ. ಸ್ವದ್ರಿ ಜಾಗದ ಉತ್ತರಕ್ಕೆ ಗಣಪತಿ ಗೋವಿಂದ ನಾಯ್ಕ ರವರ ಹಕ್ಕಿನ ಸ್ಥಳವಾಗಿರುತ್ತದೆ. ಸ್ವದ್ರಿ ಜಾಗದ ನಂತರ ಪಶ್ಚಿಮ ದಿಕ್ಕಿಗೆ ರಸ್ತೆ ಇದೆ. ಸ್ವದ್ರಿ ರಸ್ತೆಯು ದಕ್ಷಿಣದಿಂದ ಉತ್ತರಕ್ಕೆ ಹೋಗಿದೆ ಎಂದರೆ ಸರಿ. ನನ್ನ ಜಾಗದ ದಕ್ಷಿಣಕ್ಕೆ ಚಿತ್ರಗಿಯಿಂದ ಕಲ್ಲುಗುಡ್ಡೆಗೆ ಹೊಗುವ ರಸ್ತೆ ಇದೆ ಎಂದರೆ ಸರಿ.

2 ನೇ ಪ್ರತಿವಾದಿಯ ಜಾಗದ ದಕ್ಷಿಣಕ್ಕೆ ಯಾರ ಜಾಗ ಬರುತ್ತದೆ ಎಂದು ನನಗೆ ಗೊತ್ತಿಲ್ಲ. 2 ನೇ ಪ್ರತಿವಾದಿಯ ಜಾಗದ ಪೂರ್ವಕ್ಕೆ ಪುರುಷೋತ್ತಮ ನಾಯ್ಕ ಇವರ ಜಾಗ ಬಂದಿರುತ್ತದೆ. ಸ್ವದ್ರಿ ಪುರುಷೋತ್ತಮ ನಾಯ್ಕ ಇವರು ತಮ್ಮ ಜಾಗದಲ್ಲಿ 4-5 ಫೂಟು ಮಣ್ಣು ಹಾಕಿ ಸ್ವದ್ರಿ ಜಾಗದಲ್ಲಿ ಮನೆಯನ್ನು ಕಟ್ಟಿಕೊಂಡು ಆ ಜಾಗವನ್ನು ಭಾಗಾಯತ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಮುಂದುವರಿದು ನಮ್ಮ ಜಾಗಾದ ಪೂರ್ವಕ್ಕೆ ಪುರುಷೋತ್ತಮ ನಾಯ್ಕ ಇವರ ಗಡಿ ಇರುತ್ತದೆ. ಪುರುಷೋತ್ತಮ ನಾಯ್ಕ ಇವರ ಪಶ್ಚಿಮ ದಿಕ್ಕಿನಲ್ಲಿ ಮಣ್ಣು ಹಾಕಿ ಪಾಗಾರ ಕಟ್ಟಿದ್ದಾರೆ ಎಂದರೆ ಸರಿ. ನಮ್ಮ

ಜಾಗಾದ ಪೂರ್ವ ದಿಕ್ಕಿನಲ್ಲಿ 2 ನೇ ಪ್ರತಿವಾದಿಯ ಜಾಗ ಇದೆ ಎಂದು ಹೇಳುತ್ತಾರೆ. 2 ನೇ ಪ್ರತಿವಾದಿಯ ಜಾಗಾದ ದಕ್ಷಿಣದ ದಿಕ್ಕಿನಲ್ಲಿ ಪೂರ್ಣ ಪ್ರಮಾಣದ ಪಾಗಾರ ಇದೆ ಎಂದರೆ ಸಾಕ್ಷಿಯು ಸದ್ರಿ ಪಾಗಾರವು ನನ್ನ ಜಾಗಾದ ದಕ್ಷಿಣ ದಿಕ್ಕಿನಲ್ಲಿ ಇದೆ ಎಂದು ನುಡಿಯುತ್ತಾರೆ.

ಸಾಕ್ಷಿಗೆ ಒಂದು ಭಾವಚಿತ್ರವನ್ನು ತೋರಿಸಲಾಗಿ, ಸದ್ರಿ ಭಾವಚಿತ್ರದಲ್ಲಿರುವ ಎರಡು ಗದ್ದೆಗಳು ಪ್ರತಿವಾದಿಯ ಜಾಗಾ ಎಂದರೆ ಸಾಕ್ಷಿಯು ಅದು ನನ್ನ ಗದ್ದೆ ಆಗಿರುತ್ತದೆ ಎಂದು ನುಡಿಯುತ್ತಾರೆ. ಸದ್ರಿ ಫೋಟೋದ ಪೂರ್ವ ದಿಕ್ಕಿಗೆ ಪುರುಷೋತ್ತಮ ನಾಯ್ಕ ಇವರ ಜಾಗ ಇರುತ್ತದೆ ಎಂದರೆ ಸರಿ.

ಸಾಕ್ಷಿಗೆ ಭಾವಚಿತ್ರವನ್ನು ತೋರಿಸಲಾಗಿ, ಸದ್ರಿ ಭಾವಚಿತ್ರದಲ್ಲಿ ಪುರುಷೋತ್ತಮ ನಾಯ್ಕ ಇವರ ಪಶ್ಚಿಮದ ಗಡಿಗೆ ಒಂದು ಪಾಗಾರ ಇದ್ದು ಅದು ಭಾವಚಿತ್ರದಲ್ಲಿ ಕಾಣುತ್ತದೆ ಎಂದರೆ ಸರಿ. ಭಾವಚಿತ್ರದಲ್ಲಿ ಕಾಣುವ ಎರಡು ಗದ್ದೆಗಳ ದಕ್ಷಿಣ ಗಡಿಯ ಮೇಲೆ ಪಾಗಾರ ಇದೆ ಎಂದರೆ ಸರಿ.

ಭಾವಚಿತ್ರದಲ್ಲಿ ಕಾಣುವ ಎರಡು ಗದ್ದೆಗಳ ಪಶ್ಚಿಮ ಗಡಿಯ ಮೇಲೆ ಬೇಲಿ ಇದೆ ಎಂದರೆ ಸರಿಯಲ್ಲ ಸಾಕ್ಷಿಗೆ ಪುನಃ ಸದ್ರಿ ಭಾವಚಿತ್ರವನ್ನು ತೋರಿಸಲಾಗಿ ಅದರಲ್ಲಿ ಇರುವ ಬೇಲಿಯನ್ನು ತೋರಿಸಲಾಗಿ ಅದು ಏನು ಎಂದು ಕೇಳಿದ ಪ್ರಶ್ನೆಗೆ ಅದು ಬೇಲಿ ಅಲ್ಲ ಎಂದು ಉತ್ತರಿಸಿರುತ್ತಾರೆ. ಸದ್ರಿ ಭಾವಚಿತ್ರವನ್ನು **ನಿ.ಡಿ.1 ಎಂದು** ಗುರುತಿಸಲಾಯಿತು.

ಸಾಕ್ಷಿಗೆ ಇನ್ನೊಂದು ಭಾವಚಿತ್ರವನ್ನು ತೋರಿಸಲಾಗಿ, ಸದ್ರಿ ಭಾವಚಿತ್ರದಲ್ಲಿ ಅವೇ ಗದ್ದೆಗಳು ಕಾಣಿಸುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರಿದು ಸದ್ರಿ ಗದ್ದೆಗಳು ನನ್ನದಾಗಿರುತ್ತದೆ ಎಂದು ನುಡಿಯುತ್ತಾರೆ.

**ಮೂ.ದಾ.ನಂ.66/2018**

ಪಿ.ಡಬ್ಲ್ಯು.1

ಸದ್ರಿ ಭಾವಚಿತ್ರದ ಗದ್ದೆಯ ದಕ್ಷಿಣ ದಿಕ್ಕಿಗೆ ರಸ್ತೆ ಕಾಣುತ್ತಿದ್ದು, ಸದ್ರಿ ರಸ್ತೆಯು ನಾನು ಈ ಮೇಲೆ ಹೇಳಿದ ಚಿತ್ರಗಿ ಕಲ್ಲು ಗುಡ್ಡೆ ರಸ್ತೆ ಆಗಿರುತ್ತದೆ ಎಂದರೆ ಸರಿ. ಸದ್ರಿ ಭಾವಚಿತ್ರದಲ್ಲಿ ಕಾಣುವ ಪಶ್ಚಿಮದ ದಿಕ್ಕಿನ ಗಡಿಯ ಮೇಲೆ ಬೇಲಿ ಇದೆ ಎಂದರೆ ಸರಿ. ಅದನ್ನು ನಾನು ಈಗ ನೋಡುತ್ತಿದ್ದು, ಸದ್ರಿ ಭಾವಚಿತ್ರವನ್ನು **ನಿ.ಡಿ.2 ಎಂದು** ಗುರುತಿಸಲಾಯಿತು.

ಸಾಕ್ಷಿಗೆ ಇನ್ನೊಂದು ಭಾವಚಿತ್ರವನ್ನು ತೋರಿಸಲಾಗಿ, ಸದ್ರಿ ಭಾವಚಿತ್ರದ ಎರಡು ಗದ್ದೆಗಳ ಪಶ್ಚಿಮ ದಿಕ್ಕಿಗೆ ಖುಲ್ಲಾ ಜಾಗ ಇದೆ ಎಂದರೆ ಸರಿ. ಅದೂ ಕೂಡ ನನ್ನದೇ ಜಾಗ ಆಗಿರುತ್ತದೆ ಎಂದು ನುಡಿಯುತ್ತಾರೆ. ಸದ್ರಿ ಭಾವಚಿತ್ರವನ್ನು **ನಿ.ಡಿ.3 ಎಂದು** ಗುರುತಿಸಲಾಯಿತು.

ಸಾಕ್ಷಿಗೆ ಇನ್ನೊಂದು ಭಾವಚಿತ್ರವನ್ನು ತೋರಿಸಲಾಗಿ, ಸದ್ರಿ ಭಾವಚಿತ್ರದಲ್ಲಿ ಪಶ್ಚಿಮ ದಿಕ್ಕಿನ ರಸ್ತೆಯ ಸಹಿತ ಪುರುಷೋತ್ತಮ ನಾಯ್ಕ ಇವರ ಗಡಿಯ ವರೆಗೆ ಸಂಪೂರ್ಣ ಜಾಗ ಕಾಣುತ್ತದೆ ಎಂದರೆ ಸರಿ. ಸದ್ರಿ ಭಾವಚಿತ್ರವನ್ನು **ನಿ.ಡಿ.4 ಎಂದು** ಗುರುತಿಸಲಾಯಿತು.

ಸಾಕ್ಷಿಗೆ ಇನ್ನೊಂದು ಭಾವಚಿತ್ರವನ್ನು ತೋರಿಸಲಾಗಿ, ಸದ್ರಿ ಭಾವಚಿತ್ರದಲ್ಲಿ ಖಾಸಗಿ ಜಾಗಕ್ಕೆ ಹೋಗಲು ರಸ್ತೆ ಇದ್ದು, ಹಾಗೂ ಅದರ ಲಗ್ತ ಪಶ್ಚಿಮಕ್ಕೆ ಸಾರ್ವಜನಿಕ ರಸ್ತೆ ಕಾಣುತ್ತದೆ ಎಂದರೆ ಸರಿ. ಸದ್ರಿ ಭಾವಚಿತ್ರವನ್ನು **ನಿ.ಡಿ.5 ಎಂದು** ಗುರುತಿಸಲಾಯಿತು.

ನಿ.ಡಿ.1 ರಿಂದ 5 ಕ್ಕೆ ಸಂಬಂಧಿಸಿದಂತೆ ಪ್ರತಿವಾದಿ ಪರ ವಕೀಲರು ಈಗಾಗಲೇ ನ್ಯಾಯಾಲಯದ ಮುಂದೆ ಸಿಡಿಯನ್ನು ಹಾಜರಪಡಿಸಿರುತ್ತಾರೆ.

ಸದ್ರಿ ಎರಡು ಗದ್ದೆಗಳು ಅಜಮಾಸ 103 ಫೂಟು ಉದ್ದ ಹಾಗೂ 45 ಫೂಟು ಅಗಲ ಇದೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಆದರೆ ನಾನು 7 ಗುಂಟೆ 8 ಆಣೆ ಜಾಗವನ್ನು ಖರೀದಿ ಮಾಡಿರುತ್ತೇನೆ

ಎಂದು ನುಡಿಯತ್ತಾರೆ. ಈ ಎರಡು ಗದ್ದೆಗಳು ಪ್ರತಿವಾದಿ ಹಕ್ಕಿನ ಜಾಗ ಎಂದರೆ ಸರಿಯಲ್ಲ. ಪ್ರತಿವಾದಿಗಳು ಪೂರ್ವಜರ ಕಾಲದಿಂದಲೂ ಭೂ ಸುಧಾರಣಾ ಕಾನೂನು ಜಾರಿಯಲ್ಲಿ ಬರುವ ಪೂರ್ವದಿಂದಲೂ ತಮ್ಮ ಪೂರ್ವಜರ ಕಾಲದಿಂದಲೂ ರೈತರ ನಾತೆಯಿಂದ ಉಪಯೋಗಿಸುತ್ತಾ ಬಂದಿರುತ್ತಾರೆ ಎಂದರೆ ಸಾಕ್ಷಿಯು ನನಗೆ ಈ ಬಗ್ಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರಿದು ನಾನು ಖರೀದಿಸಿದ ದಿನದಿಂದ ಸಾಗುವಳಿ ಮಾಡಿರುವುದನ್ನು ನಾನು ನೋಡಿರುವುದಿಲ್ಲ.

ಪ್ರತಿವಾದಿ ಹಿರಿಯನಾದ ರಾಮಾ ನಾರಾಯಣ ಪಟಗಾರ ಇವರು ತಮ್ಮ ರೈತಾಪಿ ಹಕ್ಕಿನ ಸಲುವಾಗಿ 4 ಗುಂಟೆ 4 ಆಣೆ ಸ್ಥಳದ ಸಹಿತ ತಮ್ಮ ಉಳಿದ ರೈತಪಿ ಹಕ್ಕಿನ ಆಸ್ತಿಯ ಕುರಿತು ಕುಮಟಾ ಭೂ ನ್ಯಾಯಮಂಡಳಿಗೆ ಅರ್ಜಿಯನ್ನು ಸಲ್ಲಿಸುವ ವಿಷಯ ನನಗೆ ಗೊತ್ತಿಲ್ಲ. ಈ ರೀತಿಯಾಗಿ ಕುಮಟಾ ಭೂ ನ್ಯಾಯ ಮಂಡಳಿಯವರು ದಿಃ 20-03-1976 ರಲ್ಲಿ ಮಂಜೂರು ಮಾಡಿರುತ್ತಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ವಿಶೇಷ ತಹಶೀಲದಾರ ಕುಮಟಾ ಇವರು ರಾಮಾ ನಾರಾಯಣ ಪಟಗಾರ ಇವರ ಹೆಸರಿನಲ್ಲಿ ಫಾರ್ಮ ನಂ.10 ನ್ನು ನೀಡಿದ್ದಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ದಿಃ 11-09-1976 ರಂದು ರಾಮಾ ನಾರಾಯಣ ಪಟಗಾರ ಇವರು ದೈವಾಧೀನರಾದರು ಎಂದರೆ ಸಾಕ್ಷಿಯು ನನಗೆ ಈ ಬಗ್ಗೆ ತಿಳಿದಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿಯವರ ಹಿರಿಯರಾದ ಕಣ್ಣಪ್ಪ ಶಿವಪ್ಪ ಪಟಗಾರ ಹಾಗೂ ಆತನ ಸಹೋದರ ಬೀರಪ್ಪಾ ಶಿವಪ್ಪಾ ಪಟಗಾರ ಇವರು ಮೃತ ರಾಮಾ ನಾರಾಯಣ ಪಟಗಾರ ಇವರ ಅಣ್ಣನ ಮಗಳ ಮಕ್ಕಳು ಎಂದರೆ ಸಾಕ್ಷಿಯು ಈ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ರಾಮಾ ನಾರಾಯಣ ಪಟಗಾರ ಇವರು ತಮ್ಮ ಜೀವಿತಾವಧಿಯಲ್ಲಿ ವಿಲ್

**ಮೂ.ದಾ.ನಂ.66/2018**

ಪಿ.ಡಬ್ಲ್ಯು.1

ನಾಮೆಯನ್ನು ಬರೆದಿರುವ ವಿಚಾರ ನನಗೆ ಗೊತ್ತಿಲ್ಲ. ಪ್ರತಿವಾದಿಯವರ ಹಿರಿಯ ಕಣ್ಣಪ್ಪ ಶಿವಪ್ಪ ಪಟಗಾರ ಇವರು ದಿಃ 01-09-1997 ರಲ್ಲಿ ಮೃತರಾದರು ಎಂದರೆ ಸಾಕ್ಷಿಯು ನನಗೆ ಈ ಬಗ್ಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. 1 ಹಾಗೂ 2 ನೇ ಪ್ರತಿವಾದಿಯವರು ಕಣ್ಣಪ್ಪ ಶಿವಪ್ಪ ಪಟಗಾರ ಇವರ ಮಗ ಹಾಗೂ ಹೆಂಡತಿ ಆಗಿರುತ್ತಾರೆ ಎಂದರೆ ಸರಿ. ಇವರಿಬ್ಬರೂ ಹಾಗೂ ಉಳಿದ ವಾರಸುದಾರರು ಅ.ಕು.ಮೆ ನಾತೆಯಿಂದ 2 ನೇ ಪ್ರತಿವಾದಿಯವರ ಹೆಸರಿಗೆ ದಾಖಲಾಗಿರುತ್ತದೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ನಾನು ನನ್ನ ವಾದ ಪತ್ರದಲ್ಲಿ 2 ನೇ ಪ್ರತಿವಾದಿಯವರ ಹೆಸರಿನ ಮುಂದೆ ಅ.ಕು.ಮೆ. ಎಂದು ನಮೂದಾಗಿರುವುದು ಅವಿಭಕ್ತ ಕುಟುಂಬದ ಮ್ಯಾನೇಜರ ಎಂಬ ಅರ್ಥವನ್ನು ನೀಡುತ್ತದೆ. ನಿಪಿ 3 ರಲ್ಲಿ 2 ನೇ ಪ್ರತಿವಾದಿ ಹಾಗೂ ಬೀರಪ್ಪಾ ಶಿವಪ್ಪಾ ಪಟಗಾರ ಇವರ ಹೆಸರು ಇದೆ ಎಂದರೆ ಸರಿ. 4 ಗುಂಟೆ 4 ಆಣೆ ಜಾಗ ಇವರ ಸಾಮೂಹಿಕ ವೈವಾಟಿನಲ್ಲಿ ಇದೆ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ. ಅದರೆ ಸದ್ರಿ ಬೀರಪ್ಪಾ ಶಿವಪ್ಪಾ ಪಟಗಾರ ಇವರನ್ನು ನಾವು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ.

**(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಸಮಯವಕಾಶ ನೀಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಸಹಿ ಇದೆ

ಹೆಚ್ಚುವರಿ ಸಿವಿಲ್ ಜಡ್ಜ, ಕುಮಟಾ